# 10. ಧಾತುಗಳ ಆವರ್ತನೀಯ ವರ್ಗೀಕರಣ

**1. ಡೋಬರೈನರ್ ರವರ ತ್ರಿವಳಿ ನಿಯಮವನ್ನು ನಿರೂಪಿಸಿ.**
ಡೋಬರೈನರ್ 3 ಧಾತುಗಳ ತ್ರಿವಳಿಗಳನ್ನು ವರ್ಗವಾಗಿ ಪರಿಗಣಿಸಿದರು. ಅವುಗಳ ಪರಮಾಣು ರಾಶಿಯ ಏರಿಕೆ ಕ್ರಮದಲ್ಲಿ ಜೋಡಿಸಿದರು.
"ತ್ರಿವಳಿ ಧಾತುಗಳಲ್ಲಿ ಮಧ್ಯದ ಧಾತುವಿನ ಪರಮಾಣು ರಾಶಿಯು ಮೇಲಿನ ಮತ್ತು ಕೆಳಗಿನ ಪರಮಾಣು ರಾಶಿಗಳ ಸರಾಸರಿಗೆ ಸಮನಾಗಿರುತ್ತದೆ"
ಉದಾ:- ಕ್ಲೋರಿನ್ = 35.5, ಬ್ರೋಮಿನ್ = 80 ಅಯೋಡಿನ್= 127
ಕ್ಲೋರಿನ್ ಮತ್ತು ಅಯೋಡಿನ್ ಪರಮಾಣು ರಾಶಿಯ ಸರಾಸರಿ. $= \frac{35.5+127}{2}, = \frac{162.5}{2} = 81.22 \sim 80$

**2. ಡೋಬರೈನರ್‌ರವರು ತಿಳಿಸಿದ ತ್ರಿವಳಿ ಧಾತುಗಳನ್ನು ಹೆಸರಿಸಿ.**
ಮೇಲಿನಂದ ಕೆಳಗೆ ಪಕ್ಕದಲ್ಲಿನ ಕೋಷ್ಟಕವನ್ನು ಓದಿದಾಗ

| | | |
|---|---|---|
| Li | Ca | Cl |
| Na | Sr | Br |
| K | Ba | I |

1. ಲಿಥಿಯಂ-ಸೋಡಿಯಂ ಮತ್ತು ಪೊಟ್ಯಾಸಿಯಂ
2. ಕ್ಯಾಲ್ಸಿಯಂ-ಸ್ಟ್ರಾನ್ಸಿಯಂ ಮತ್ತು ಬೇರಿಯಂ
3. ಕ್ಲೋರಿನ್-ಬ್ರೋಮಿನ್ ಮತ್ತು ಅಯೋಡಿನ್ ಇವುಗಳು ಡೋಬರೈನ್‌ರವರು ತಿಳಿಸಿದ ತ್ರಿವಳಿಗಳಾಗಿವೆ.

**3. ಡೋಬರೈನರ್‌ರವರ ವರ್ಗೀಕರಣದ ಮಿತಿಗಳಾವುವು?**

- ಡೋಬರೈನರ್‌ನವರ ತ್ರಿವಳಿಗಳ ನಿಯಮವು ಎಲ್ಲಾ ಧಾತುಗಳಿಗೂ ಅನ್ವಯಿಸಲಿಲ್ಲ
- ಆ ಕಾಲದಲ್ಲಿ ತಿಳಿದಿದ್ದ ಧಾತುಗಳಲ್ಲಿ ಕೇವಲ ಮೂರು ತ್ರಿವಳಿಗಳನ್ನು ಮಾತ್ರ ಗುರುತಿಸಲು ಸಾಧ್ಯವಾಯಿತು

**4. ನ್ಯೂಲ್ಯಾಂಡರ ಅಷ್ಟಕ ನಿಯಮ ತಿಳಿಸಿ.**
"ನ್ಯೂಲ್ಯಾಂಡರ ಪ್ರಕಾರ ಧಾತುಗಳನ್ನು ಪರಮಾಣು ರಾಶಿಯ ಏರಿಕೆಯ ಕ್ರಮದಲ್ಲಿ ಜೋಡಿಸಿದಾಗ 8ನೇ ಧಾತುವಿನ ಲಕ್ಷಣಗಳು ಮೊದಲನೇ ಧಾತುವನ್ನು ಹೋಲುತ್ತದೆ."

**5. ನ್ಯೂಲ್ಯಾಂಡ್‌ರವರ ಅಷ್ಟಕಗಳ ನಿಯಮದ ಮಿತಿಗಳಾವುವು?**

- ಅಷ್ಟಕಗಳ ನಿಯಮವು ಕೇವಲ ಕ್ಯಾಲ್ಸಿಯಂವರೆಗೆ ಮಾತ್ರ ಅನ್ವಯಿಸುತ್ತದೆ. ಕ್ಯಾಲ್ಸಿಯಂನ ನಂತರದ ಪ್ರತಿ ಎಂಟನೇ ಧಾತುವಿನ ಗುಣಗಳು ಮೊದಲನೇ ಧಾತುವಿನ ಗುಣಗಳಂತೆ ಇರುವುದಿಲ್ಲ.
- ನ್ಯೂಲ್ಯಾಂಡ್ಸ್‌ರವರು ನಿಸರ್ಗದಲ್ಲಿ ಕೇವಲ 56 ಧಾತುಗಳಿವೆ ಮತ್ತು ಭವಿಷ್ಯದಲ್ಲಿ ಯಾವುದೇ ಧಾತುಗಳ ಆವಿಷ್ಕಾರವಾಗುವುದಿಲ್ಲ ಎಂದು ಊಹಿಸಿದ್ದರು. ಆದರೆ, ನಂತರದಲ್ಲಿ ಹಲವಾರು ಹೊಸ ಧಾತುಗಳನ್ನು ಆವಿಷ್ಕರಿಸಲಾಯಿತು. ಅವುಗಳ ಗುಣಗಳು ಅಷ್ಟಕಗಳ ನಿಯಮಕ್ಕೆ ಸರಿಹೊಂದಲಿಲ್ಲ.
- ತನ್ನಕೋಷ್ಟಕದಲ್ಲಿ ಸರಿಹೊಂದಿಸಲು ನ್ಯೂಲ್ಯಾಂಡ್ಸ್‌ರವರು ಒಂದೇ ಸ್ಥಳದಲ್ಲಿ ಎರಡು ಧಾತುಗಳನ್ನು ಇರಿಸಿದರು. ಅಷ್ಟೇ ಅಲ್ಲದೆ ಕೆಲವು ಹೋಲಿಕೆಯಿಲ್ಲದ ಧಾತುಗಳನ್ನು ಒಂದೇ ಸ್ವರದಡಿಯಲ್ಲಿ ಇರಿಸಿದರು.
- ಜಡಅನಿಲಗಳ ಆವಿಷ್ಕಾರದಿಂದಾಗಿ ಅಷ್ಟಕಗಳ ನಿಯಮ ಅಪ್ರಸ್ತುತವಾಯಿತು.

**6. ಮೆಂಡಲೀವ್‌ರ ಆವರ್ತ ಕೋಷ್ಟಕದ ನಿಯಮದ ಹೇಳಿಕೆ ನೀಡಿ.**
ಧಾತುಗಳ ಗುಣಗಳು ಅವುಗಳ ಪರಮಾಣುರಾಶಿಯ ಆವರ್ತನೀಯ ಪುನರಾವರ್ತನೆಗಳು.

**7. ಈ ಧಾತುಗಳ ಆಕ್ಸೈಡ್‌ಗಳ ಸೂತ್ರಗಳನ್ನು ಊಹಿಸಲು ಮೆಂಡಲೀವ್‌ರವರ ಆವರ್ತಕ ಕೋಷ್ಟಕ ಬಳಸಿ. K, C, Al, Si, Ba.**

- K (ಪೊಟ್ಯಾಸಿಯಂ) 1ನೇ ವರ್ಗಕ್ಕೆ ಸೇರುತ್ತದೆ. ಅದರ ವೇಲೆನ್ಸಿ 1 ಆದ್ದರಿಂದ ಅದರ ಆಕ್ಸೈಡ್‌ನ ಸೂತ್ರ $K_2O$
- C (ಕಾರ್ಬನ್) 4ನೇ ವರ್ಗಕ್ಕೆ ಸೇರುತ್ತದೆ. ಅದರ ವೇಲೆನ್ಸಿ 4 ಆದ್ದರಿಂದ ಅದರ ಆಕ್ಸೈಡ್‌ನ ಸೂತ್ರ $CO_2$
- Al (ಅಲ್ಯೂಮಿನಿಯಂ) 3ನೇ ವರ್ಗಕ್ಕೆ ಸೇರುತ್ತದೆ. ಅದರ ವೇಲೆನ್ಸಿ 3 ಆದ್ದರಿಂದ ಅದರ ಆಕ್ಸೈಡ್‌ನ ಸೂತ್ರ $Al_2O_3$
- Si (ಸಿಲಿಕಾನ್) 4ನೇ ವರ್ಗಕ್ಕೆ ಸೇರುತ್ತದೆ. ಅದರ ವೇಲೆನ್ಸಿ 4 ಆದ್ದರಿಂದ ಅದರ ಆಕ್ಸೈಡ್‌ನ ಸೂತ್ರ $SiO_2$

- Ba (ಬೇರಿಯಂ) 2ನೇ ವರ್ಗಕ್ಕೆ ಸೇರುತ್ತದೆ. ಅದರ ವೇಲೆನ್ಸಿ 2 ಆದ್ದರಿಂದ ಅದರ ಆಕ್ಸೈಡ್‌ನ ಸೂತ್ರ BaO

**8. ಮೆಂಡಲೀವ್ ತನ್ನ ಆವರ್ತಕ ಕೋಷ್ಟಕದಲ್ಲಿ ಖಾಲಿ ಜಾಗವನ್ನು ಬಿಟ್ಟನಂತರದಲ್ಲಿ ಗ್ಯಾಲಿಯಂನ ಜೊತೆ ಇನ್ನೂ ಯಾವ ಧಾತುಗಳನ್ನು ಪತ್ತೆ ಮಾಡಲಾಯಿತು? (ಯಾವುದಾದರೂ ಎರಡು):**
ಗ್ಯಾಲಿಯಂ, ಜರ್ಮೇನಿಯಂ ಮತ್ತು ಸ್ಕ್ಯಾಂಡಿಯಂ.

**9. ಮೆಂಡಲೀವ್‌ರವರು ತಮ್ಮ ಆವರ್ತಕ ಕೋಷ್ಟಕದ ರಚನೆಗೆ ಉಪಯೋಗಿಸಿದ ಮಾನದಂಡಗಳು ಯಾವುವು?**

- ಧಾತುಗಳನ್ನು ಅವುಗಳ ಪರಮಾಣು ರಾಶಿ, ಮೂಲಭೂತ ಗುಣಗಳು ಮತ್ತು ಒಂದೇ ರೀತಿಯ ರಾಸಾಯನಿಕ ಲಕ್ಷಣಗಳ ಆಧಾರದ ಮೇಲೆ ಧಾತುಗಳನ್ನು ಜೋಡಣೆ ಮಾಡಿದರು.
- ಧಾತುಗಳ ಪರಮಾಣು ರಾಶಿಗಳು ಮತ್ತು ಅವುಗಳ ಭೌತ ಮತ್ತು ರಾಸಾಯನಿಕ ಗುಣಗಳ ನಡುವಣ ಸಂಬಂಧವನ್ನು ಪರಿಶೀಲಿಸಿದರು.
- ರಾಸಾಯನಿಕ ಗುಣಗಳಲ್ಲಿ ಮೆಂಡಲೀವ್‌ರವರು ಹೈಡ್ರೋಜನ್ ಮತ್ತು ಆಕ್ಸಿಜನ್ ಧಾತುಗಳು ಉಂಟುಮಾಡುವ ಸಂಯಕ್ತಗಳ ಮೇಲೆ ಗಮನ ಹರಿಸಿದರು.
- ಹೈಡ್ರೋಜನ್ ಮತ್ತು ಆಕ್ಸಿಜನ್‌ಗಳು ಅತಿ ಹೆಚ್ಚು ಕ್ರಿಯಾಪಟುತ್ವವುಳ್ಳ ಮತ್ತು ಬಹುತೇಕ ಧಾತುಗಳೊಂದಿಗೆ ಸಂಯುಕ್ತಗಳನ್ನು ಕೊಡುತ್ತಿದ್ದರಿಂದ ಅವರು ಅವುಗಳನ್ನು ಆಯ್ಕೆ ಮಾಡಿಕೊಂಡರು.
- ಧಾತುವೊಂದು ಉಂಟುಮಾಡುವ ಹೈಡ್ರೈಡ್‌ಗಳು ಮತ್ತು ಆಕ್ಸೈಡ್‌ಗಳ ಸೂತ್ರಗಳನ್ನು ಆದರಿಸಿ ಧಾತುವಿನ ವರ್ಗೀಕರಣದಲ್ಲಿ ಇದನ್ನು ಒಂದು ಮೂಲಭೂತಗುಣವೆಂದು ಭಾವಿಸಿದರು.
- ಮೆಂಡಲೀವ್‌ರವರು ತಾವಿದ್ದ ಕಾಲದಲ್ಲಿ ದೊರೆತಿದ್ದ 63 ಧಾತುಗಳ ಗುಣಗಳನ್ನು ಕಾರ್ಡ್‌ಗಳಲ್ಲಿ ಬರೆದು ಪಿನ್‌ಗಳ ಸಹಾಯದಿಂದ ಗೋಡೆಗೆ ನೇತು ಹಾಕಿದ್ದರು.

**10. ನೀವು ರಾಜಾನಿಲಗಳನ್ನು ಬೇರೆ ಗುಂಪಿನಲ್ಲಿಡಬೇಕೆಂದು ಏಕೆ ಯೋಚಿಸುವಿರಿ?**

- ರಾಜಾನಿಲಗಳ ವೇಲೆನ್ಸಿ ಸೊನ್ನೆಯಾಗಿದೆ.
- ಸಾಮಾನ್ಯವಾಗಿ ರಾಸಾಯನಿಕ ಕ್ರಿಯೆಯಲ್ಲಿ ಭಾಗವಹಿಸುವುದಿಲ್ಲ.
- ಈ ಧಾತುಗಳ ಪರಮಾಣುವಿನ ಕವಚಗಳು ಇಲೆಕ್ಟ್ರಾನ್‌ಗಳಿಂದ ಸಂಪೂರ್ಣವಾಗಿ ತುಂಬಿಕೊಂಡಿದ್ದು, ಅಷ್ಟಕ ಜೋಡಣೆ ಹೊಂದಿವೆ.

**11. ಮೆಂಡಲೀವ್‌ರವರ ಆವರ್ತಕ ಕೋಷ್ಟಕದಲ್ಲಿದ್ದ ವಿವಿಧ ಅಸಂಗತತೆಗಳನ್ನು ಆಧುನಿಕ ಆವರ್ತಕ ಕೋಷ್ಟಕವು ಹೇಗೆ ತೆಗೆದು ಹಾಕಿತು?**

- ಧಾತುಗಳನ್ನು ಅವುಗಳ ಪರಮಾಣುರಾಶಿಯ ಬದಲು ಪರಮಾಣು ಸಂಖ್ಯೆಯ ಏರಿಕೆಕ್ರಮದಲ್ಲಿ ಜೋಡಿಸಲಾಗಿದ್ದು ಪ್ರಮುಖ ಅಂಶವಾಗಿದೆ.
- ಸಮಸ್ಥಾನಿ ಧಾತುಗಳಿಗೆ ಮತ್ತು ಹೈಡ್ರೋಜನ್‌ಗೆ ಸ್ಥಿರಸ್ಥಾನವನ್ನು ಕೊಡಲಾಗಿದೆ.
- ಧಾತುಗಳ ಇಲೆಕ್ಟ್ರಾನಿಕ್ ವಿನ್ಯಾಸದ ಆಧಾರದ ಮೇಲೆ ಧಾತುಗಳನ್ನು ಜೋಡಿಸಲಾಗಿದೆ.
- ಜಡಾನಿಲಗಳನ್ನು 18ನೇ ವರ್ಗದಲ್ಲಿಟ್ಟು, ಅಷ್ಟಕ ಜೋಡಣೆಯುಳ್ಳ ಧಾತುಗಳೆಂದು ಪರಿಗಣಿಸಲಾಗಿದೆ.

**12. ಆಧುನಿಕ ಆವರ್ತಕ ನಿಯಮವನ್ನು ನಿರೂಪಿಸಿ.**
" ಧಾತುಗಳ ಗುಣಗಳು ಅವುಗಳ ಪರಮಾಣು ಸಂಖ್ಯೆಗಳ ಆವರ್ತನೀಯ ಪುನರಾವರ್ತನೆಗಳು". ಆಧುನಿಕ ಆವರ್ತ ಕೋಷ್ಟಕವನ್ನು ಮೋಸ್ಲೆ ಎಂಬ ವಿಜ್ಞಾನಿಯು ರಚಿಸಿದರು.

**13. ಆಧುನಿಕ ಆವರ್ತ ಕೋಷ್ಟಕದ ಸಾಮಾನ್ಯ ಲಕ್ಷಣಗಳನ್ನು ಪಟ್ಟಿಮಾಡಿ.**

- **ಆವರ್ತ**: ಆವರ್ತ ಕೋಷ್ಠಕದ ಅಡ್ಡ ಸಾಲುಗಳನ್ನು ಆವರ್ತ ಎನ್ನುವರು. ಆವರ್ತ ಕೋಷ್ಠಕದಲ್ಲಿ 7 ಆವರ್ತಗಳಿವೆ.
- **ವರ್ಗ**/ಗುಂಪು: ಆವರ್ತ ಕೋಷ್ಠಕದ ಕಂಬ ಸಾಲುಗಳನ್ನು ವರ್ಗ/ಗುಂಪು ಎನ್ನುವರು. ಆವರ್ತ ಕೋಷ್ಠಕದಲ್ಲಿ 18 ವರ್ಗಗಳಿವೆ.

- 18ನೇ ವರ್ಗದ ಧಾತುಗಳು: 18ನೇ ವರ್ಗದ ಧಾತುಗಳ ವೇಲೆನ್ಸಿ ಸೊನ್ನೆ ಆಗಿರುವುದರಿಂದ ಇದನ್ನು ಸೊನ್ನೆ ವರ್ಗ ಎನ್ನುವರು.
- ಈ ವರ್ಗದ ಧಾತುಗಳ ಕಕ್ಷೆಗಳು ಗರಿಷ್ಟ ಸಂಖ್ಯೆಯ ಇಲೆಕ್ಟ್ರಾನ್‌ಗಳಿಂದ ಭರ್ತಿಯಾಗಿರುತ್ತದೆ.
- ಆರ್ಗಾನ್ ನಂತಹ ಧಾತುವಿನ ಪರಮಾಣುವು ಅಷ್ಟಕ ಜೋಡಣೆ ಹೊಂದಿದೆ. $Ar=18=1S^2\ 2S^2\ 2P^6\ 3S^2\ 3P^6$
- ಅಷ್ಟಕ ಜೋಡಣೆ ಹೊಂದಿರುವ 18ನೇ ವರ್ಗದ ಧಾತುಗಳು ರಾಸಾಯನಿಕ ಕ್ರಿಯೆಯಲ್ಲಿ ಪಾಲ್ಗೊಳ್ಳದೆ ಜಡತ್ವ ಪ್ರದರ್ಶಿಸುವುದರಿಂದ ಇವುಗಳನ್ನು ***ಜಡ ಅನಿಲಗಳು ಅಥವಾ ರಾಜಾನಿಲಗಳು*** ಎನ್ನುವರು.
- ಆವರ್ತ ಕೋಷ್ಟಕದ ಬ್ಲಾಕ್‌ಗಳು: ಆವರ್ತ ಕೋಷ್ಠಕವನ್ನು 4 ಬ್ಲಾಕ್‌ಗಳಾಗಿ ವಿಂಗಡಿಸುವರು.ಅವುಗಳೆಂದರೆ,
- s ಬ್ಲಾಕ್ 1–2ನೇ ವರ್ಗ, p ಬ್ಲಾಕ್ 13–18ನೇ ವರ್ಗ, d ಬ್ಲಾಕ್ 3–12ನೇ ವರ್ಗ. f ಬ್ಲಾಕ್ ಆವರ್ತಕ ಕೋಷ್ಟಕದ ಕೆಳಗಿನ ಕೊನೆಯ ಎರಡು ಸಾಲುಗಳು. f ಬ್ಲಾಕ್ ಧಾತುಗಳನ್ನು ಆವರ್ತ ಕೋಷ್ಟಕದ ಕೆಳಗೆ ಪ್ರತ್ಯೇಕವಾಗಿ ಇಡಲಾಗಿದೆ. ಇವುಗಳನ್ನು ಲ್ಯಾಂಥನಾಯ್ಡ್ & ಆಕ್ಟಿನಾಯ್ಡ್ ಎನ್ನುವರು.
- ಲ್ಯಾಂಥನಾಯ್ಡ್ & ಆಕ್ಟಿನಾಯ್ಡ್ ಸರಣಿಯ ಧಾತುಗಳು ಕಂಬ ಸಾಲುಗಳಿಗಿಂತ ಅಡ್ಡ ಸಾಲುಗಳಲ್ಲಿ ಹೆಚ್ಚು ಸಾಮ್ಯ ಲಕ್ಷಣಗಳನ್ನು ಹೊಂದಿರುವುದರಿಂದ ಪ್ರತ್ಯೇಕವಾಗಿ ಆವರ್ತಕ ಕೋಷ್ಟಕದ ಕೆಳಗೆ ಇಡಲಾಗಿದೆ.
- ಲಾಂಥನಾಯ್ಡ್: ಲ್ಯಾಂಥೇನಿಯಂ ನಂತರ ಬರುವ ಪರಮಾಣು ಸಂಖ್ಯೆ 58 ರಿಂದ 71ರವರೆಗಿನ 14 ಧಾತುಗಳನ್ನು ಲ್ಯಾಂಥನಾಯ್ಡ್ ಸರಣಿ ಧಾತುಗಳು ಎನ್ನುವರು.
- ಆಕ್ಟಿನಾಯ್ಡ್: ಆಕ್ಟೇನಿಯಂ ನಂತರ ಬರುವ 90 ರಿಂದ 103 ರವರೆಗಿನ 14 ಧಾತುಗಳನ್ನು ಆಕ್ಟಿನಾಯ್ಡ್ ಸರಣಿ ಧಾತುಗಳು ಎನ್ನುವರು.
- ಹೈಡ್ರೋಜನ್ & ಹೀಲಿಯಂ ಧಾತುಗಳ ಜೋಡಣೆ: ಹೈಡ್ರೋಜನ್ & ಹೀಲಿಯಂ ಕ್ರಮವಾಗಿ $1S^1$ & $1S^2$ ಇಲೆಕ್ಟ್ರಾನ್ ವಿನ್ಯಾಸ ಹೊಂದಿದೆ. ಹೀಲಿಯಂ ಜಡ ಅನಿಲವಾಗಿರುವುದರಿಂದ ಅಕ್ಕ ಪಕ್ಕದಲ್ಲಿ ಇಡದೆ 18ನೇ ವರ್ಗದಲ್ಲಿ ಸೇರಿಸಲಾಗಿದೆ.

**14. ಮೆಗ್ನೀಸಿಯಂನಂತೆಯೇ ರಾಸಾಯನಿಕ ಕ್ರಿಯೆಗಳನ್ನು ತೋರಿಸುವ ಎರಡು ಧಾತುಗಳನ್ನು ಊಹಿಸಿ. ನಿಮ್ಮ ಆಯ್ಕೆಗೆ ಆಧಾರವೇನು?**

ಬೆರಿಲಿಯಂ ಮತ್ತು ಕ್ಯಾಲ್ಸಿಯಂ ಧಾತುಗಳು ಮೆಗ್ನೀಸಿಯಂನಂತೆಯೇ ರಾಸಾಯನಿಕ ಕ್ರಿಯೆಗಳನ್ನು ತೋರಿಸುತ್ತವೆ.

**15. ಆಧುನಿಕ ಆವರ್ತಕ ಕೋಷ್ಟಕದಲ್ಲಿ 1ನೇ ಗುಂಪಿನ ಧಾತುಗಳನ್ನು ಹೆಸರಿಸಿ.**

ಹೈಡ್ರೋಜನ್, ಲೀಥಿಯಂ, ಸೋಡಿಯಂ, ಪೊಟ್ಯಾಸಿಯಂ, ರುಬಿಡಿಯಂ, ಸೀಸಿಯಂ, ಫ್ರಾನ್ಸಿಯಂ.

**16. ಒಂದನೇ ಗುಂಪಿನ ಧಾತುಗಳಲ್ಲಿ ಕಂಡುಬರುವ ಒಂದು ಸಾಮಾನ್ಯ ಹೋಲಿಕೆ ಏನು?**

ಈ ಗುಂಪಿನ ಧಾತುಗಳು s-ಬ್ಲಾಕ್ ಗೆ ಸೇರಿವೆ, ಈ ಗುಂಪಿನ ಧಾತುಗಳ ವೇಲೆನ್ಸಿ ಮತ್ತು ವೇಲೆನ್ಸ್ ಇಲೆಕ್ಟ್ರಾನ್‌ಗಳ ಸಂಖ್ಯೆಯು 1 ಆಗಿದೆ.

**17. ಸಂಕ್ರಾಂತಿ ಧಾತುಗಳು ಎಂದರೇನು?**

ಯಾವ ಧಾತುಗಳ ಪರಮಾಣುಗಳ ಇಲೆಕ್ಟ್ರಾನ್‌ಗಳು ಪೂರ್ವಾಂತಿಮ ಕವಚವನ್ನು ಭಾಗಶಃ ಖಾಲಿ ಬಿಟ್ಟು ಹೊರಗಿನ ಕವಚಗಳನ್ನು ಆಕ್ರಮಿಸಿಕೊಳ್ಳುತ್ತವೆಯೋ ಅಂತಹವುಗಳನ್ನು ಸಂಕ್ರಾಂತಿ ಧಾತು ಎನ್ನುವರು.

d ಬ್ಲಾಕ್ ಧಾತುಗಳನ್ನು ಹೊರಗಿನ ಸಂಕ್ರಮಣ ಧಾತುಗಳು ಎನ್ನುವರು. ಜಿ ಬ್ಲಾಕ್ ಧಾತುಗಳನ್ನು ಒಳಗಿನ ಸಂಕ್ರಮಣ ಧಾತು ಎನ್ನುವರು.

**(ನೆನಪಿರಲಿ:**

ಧಾತು ಯಾವ ಬ್ಲಾಕ್‌ಗೆ ಸೇರಿದೆ ಎಂದು ಕಂಡು ಹಿಡಿಯುವ ವಿಧಾನ.

ಉದಾ: 1: Na=11 ಇ.ವಿ. = $1S^2\ 2S^2\ 2P^6\ 3S^1$ ಅತ್ಯಂತ ಹೊರಕವಚವಾದ S ನಲ್ಲಿ ಇಲೆಕ್ಟ್ರಾನ್ ಇರುವುದರಿಂದ ಇದು s ಬ್ಲಾಕ್‌ಗೆ ಸೇರುತ್ತದೆ.

ಉದಾ: 2 Al=13 ಇ.ವಿ. = $1S^2\ 2S^2\ 2P^6\ 3S^2\ 3P^1$ ಅತ್ಯಂತ ಹೊರಕವಚವಾದ P ನಲ್ಲಿ ಇಲೆಕ್ಟ್ರಾನ್ ಇರುವುದರಿಂದ ಇದು p ಬ್ಲಾಕ್‌ಗೆ ಸೇರುತ್ತದೆ.

ಉದಾ: 3 Fe=26 ಇ.ವಿ.= $1S^2\ 2S^2\ 2P^6\ 3S^2\ 3P^6\ 4S^2\ 3d^6$ ಅತ್ಯಂತ ಹೊರಕವಚವಾದ d ನಲ್ಲಿ ಇಲೆಕ್ಟ್ರಾನ್ ಇರುವುದರಿಂದ ಇದು d ಬ್ಲಾಕ್‌ಗೆ ಸೇರುತ್ತದೆ.

**ಧಾತುವು ಯಾವ ಆವರ್ತಕ್ಕೆ ಸೇರಿದೆ ಎಂದು ಕಂಡು ಹಿಡಿಯುವ ವಿಧಾನ:**

ಉದಾ: 1 Ca=20 ಇ.ವಿ.= $1S^2\ 2S^2\ 2P^6\ 3S^2\ 3P^6\ 4S^2$ ಕ್ಯಾಲ್ಸಿಯಂನಲ್ಲಿ ಗರಿಷ್ಟ ಕವಚ ಸಂಖ್ಯೆ 4 ಆಗಿರುವುದರಿಂದ 4ನೇ ಆವರ್ತಕ್ಕೆ ಸೇರುತ್ತದೆ.

ಉದಾ:2 Mn=25 ಇ.ವಿ.= $1S^2\ 2S^2\ 2P^6\ 3S^2\ 3P^6\ 4S^2\ 3d^5$ ಮ್ಯಾಂಗನೀಸ್ ನಲ್ಲಿ ಗರಿಷ್ಟ ಕವಚ ಸಂಖ್ಯೆ 4 ಆಗಿರುವುದರಿಂದ 4ನೇ ಆವರ್ತ

ಉದಾ: 3 Zn=30 ಇ.ವಿ.= $1S^2\ 2S^2\ 2P^6\ 3S^2\ 3P^6\ 4S^2\ 3d^{10}$ ಜಿಂಕ್ ನಲ್ಲಿ ಗರಿಷ್ಟ ಕವಚ ಸಂಖ್ಯೆಯು 4 ಆಗಿರುವುದರಿಂದ 4 ನೇ ಆವರ್ತ

**ಧಾತು ಯಾವ ವರ್ಗ/ ಗುಂಪಿನಲ್ಲಿದೆ ಎಂದು ಕಂಡು ಹಿಡಿಯಲು:**

* ಕೊನೆಯ ಬ್ಲಾಕ್ $S^1$ ಆಗಿದ್ದಲ್ಲಿ ಅದು 1ನೇ ವರ್ಗ/ಗುಂಪು, * ಕೊನೆಯ ಬ್ಲಾಕ್ $S^2$ ಆಗಿದ್ದಲ್ಲಿ 2ನೇ ವರ್ಗ/ಗುಂಪು

* ಧಾತುವು ತನ್ನ ಕೊನೆಯ ಕವಚದಲ್ಲಿನ ಇಲೆಕ್ಟ್ರಾನ್‌ಗಳನ್ನು P ಬ್ಲಾಕ್ ನಲ್ಲಿ ಹಂಚಿಕೊಂಡಿದ್ದರೆ ಆ ಧಾತುವಿನ ಗುಂಪನ್ನು ಈ ರೀತಿಯಾಗಿ ಕಂಡುಹಿಡಿಯಬಹುದು. $(P^{(n+12)})$

ಉದಾ: 1. ಆರ್ಗಾನ್ ನ(18) ಇ.ವಿ.= $1S^2\ 2S^2\ 2P^6\ 3S^2\ 3P^6$, ಕೊನೆಯ ಬ್ಲಾಕ್ P ಆಗಿದೆ, ಇದರಲ್ಲಿ 6 ಇಲೆಕ್ಟ್ರಾನ್‌ಗಳಿವೆ ಅಂದರೆ ಅದಕ್ಕೆ 12 ನ್ನು ಕೂಡಿದರೆ 18 ಆಗುತ್ತದೆ, ಆರ್ಗಾನ್18ನೇ ವರ್ಗದ/ಗುಂಪಿನ ಧಾತುವೆಂದು ಅರ್ಥೈಸಬಹುದು,

2. ಒಂದು ವೇಳೆ P ಬ್ಲಾಕ್ ನಲ್ಲಿ 5 ಇಲೆಕ್ಟ್ರಾನ್ ಹಂಚಿಕೊಂಡಿದ್ದರೆ, ಅದಕ್ಕೆ 12 ಕೂಡಿದರೆ 17 ಆಗುತ್ತದೆ, ಆ ಧಾತು 17ನೇವರ್ಗ ಎಂದು ಪರಿಗಣಿಸಬಹುದು.

* ಧಾತುವು ತನ್ನ ಕೊನೆಯ ಕವಚದಲ್ಲಿನ ಇಲೆಕ್ಟ್ರಾನ್‌ಗಳನ್ನು d ಬ್ಲಾಕ್‌ನಲ್ಲಿ ಹಂಚಿ ಕೊಂಡಿದ್ದರೆ, ಅದಕ್ಕೆ 2 ಸಂಖ್ಯೆ ಕೂಡಿದಾಗ ಧಾತುವಿರುವ ಗುಂಪು/ವರ್ಗ

ಸುಲಭವಾಗಿ ಪತ್ತೆಹಚ್ಚಬಹುದು $(d^{(n+2)})$ ಉದಾ: 1. Mn=25 ಇ.ವಿ.= $1S^2\ 2S^2\ 2P^6\ 3S^2\ 3P^6\ 4S^2\ 3d^5$

ಇಲ್ಲಿ ಮ್ಯಾಂಗನೀಸ್ ಧಾತುವಿನ ಕೊನೆಯ ಇಲೆಕ್ಟ್ರಾನ್‌ಗಳು d ಬ್ಲಾಕ್‌ನಲ್ಲಿ ಹಂಚಿಕೆಯಾಗಿವೆ, d ಬ್ಲಾಕ್‌ನಲ್ಲಿ 5 ಇಲೆಕ್ಟ್ರಾನ್‌ಗಳಿವೆ ಅದಕ್ಕೆ 2 ಕೂಡಿದರೆ ಅದರ ವರ್ಗ/ ಗುಂಪು ಸುಲಭವಾಗಿ ತಿಳಿಯಬಹುದು, ಅಂದರೆ ಮ್ಯಾಂಗನೀಸ್ 7ನೇ ವರ್ಗ/ಗುಂಪಿಗೆ ಸೇರುತ್ತದೆ.

ಉದಾ:2. Fe=26 ಇ.ವಿ.= $1S^2\ 2S^2\ 2P^6\ 3S^2\ 3P^6\ 4S^2\ 3d^6$

ಕೊನೆಯ ಬ್ಲಾಕ್‌ನಲ್ಲಿ ಹಂಚಿಕೆಯಾಗಿರುವ ಇಲೆಕ್ಟ್ರಾನ್‌ಗಳ ಸಂಖ್ಯೆ 6, 6+2= 8, ಕಬ್ಬಿಣ 8ನೇ ವರ್ಗದ/ಗುಂಪಿನ ಧಾತು)

**18. ಪರಮಾಣು ಗಾತ್ರದ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿ:**

ಪರಮಾಣುವಿನ ಗಾತ್ರವು ಅಯಾನೀಕರಣ ಶಕ್ತಿ & ಇಲೆಕ್ಟ್ರಾನ್‌ನ ಮಿತೃತ್ವಗಳನ್ನು ನಿರ್ಧರಿಸುತ್ತದೆ. ಪರಮಾಣುವಿನ ಗಾತ್ರವು ಎಡದಿಂದ ಬಲಕ್ಕೆ ಸಾಗಿದಂತೆ ಕಡಿಮೆಯಾಗುತ್ತದೆ. ಏಕೆಂದರೆ ಒಂದು ಆವರ್ತದಲ್ಲಿ ಕವಚಗಳ ಸಂಖ್ಯೆ ಹೆಚ್ಚಾಗುವುದಿಲ್ಲ. ಆದರೆ ಅದೇ ಕವಚಕ್ಕೆ ಇಲೆಕ್ಟ್ರಾನ್‌ಗಳು ಸೇರ್ಪಡೆಯಾಗುತ್ತದೆ. ನ್ಯೂಕ್ಲಿಯಸ್ ಇಲೆಕ್ಟ್ರಾನ್‌ಗಳಿಗೆ ಒಳಮುಖ ಸೆಳೆತ ಉಂಟುಮಾಡುವುದರಿಂದ ಗಾತ್ರ ಕಡಿಮೆಯಾಗುತ್ತದೆ. ಉದಾ: **Li>Be>B><N>O>F>Ne**

**19. ಅಯಾನೀಕರಣ ಶಕ್ತಿ ಎಂದರೇನು?**

ಪರಮಾಣುವಿನ ಅತ್ಯಂತ ಹೊರ ಕಕ್ಷೆಯಲ್ಲಿರುವ ಇಲೆಕ್ಟ್ರಾನ್‌ಗಳನ್ನು ತೆಗೆಯಲು ಬೇಕಾದ ಶಕ್ತಿ.

ಅಯಾನೀಕರಣ ಶಕ್ತಿಯು ಆವರ್ತದಲ್ಲಿ ಮುಂದೆ ಸಾಗಿದಂತೆ ಹೆಚ್ಚುತ್ತದೆ. & ವರ್ಗದಲ್ಲಿ ಕೆಳಗೆ ಹೋದಂತೆ ಕಡಿಮೆಯಾಗುತ್ತದೆ.

**20. ವಿದ್ಯುತ್ ರಾಸಾಯನಿಕ ಗುಣ:**

ವಿದ್ಯುತ್ ಧನೀಯ ಪರಮಾಣು [+ve] : – ಇಲೆಕ್ಟ್ರಾನ್‌ಗಳನ್ನು ಸುಲಭವಾಗಿ ಬಿಟ್ಟುಕೊಡುವ ಪರಮಾಣುಗಳು ವಿದ್ಯುತ್ ಧನೀಯ ಪರಮಾಣು.  ಉದಾ:–Na.

ವಿದ್ಯುತ್ ಧನೀಯತೆ [+ve] ಆವರ್ತದಲ್ಲಿ ಮುಂದೆ ಹೋದಂತೆ ಕಡಿಮೆಯಾಗುವುದು & ವರ್ಗದಲ್ಲಿ ಕೆಳಗೆ ಹೋದಂತೆ ಹೆಚ್ಚಾಗುವುದು.

ವಿದ್ಯುತ್‌ಋಣೀಯ ಪರಮಾಣು [-ve ]:– ಇಲೆಕ್ಟ್ರಾನ್‌ಗಳನ್ನು ಸುಲಭವಾಗಿ ಸ್ವೀಕರಿಸುವ ಪರಮಾಣುಗಳು ವಿದ್ಯುತ್ ಋಣೀಯ ಪರಮಾಣು.  ಉದಾ:– Cl

ವಿದ್ಯುತ್ ಋಣೀಯತೆ [-ve] ಆವರ್ತದಲ್ಲಿ ಮುಂದೆ ಹೋದಂತೆ ಹೆಚ್ಚಾಗುವುದು & ವರ್ಗದಲ್ಲಿ ಕೆಳಗೆ ಹೋದಂತೆ ಕಡಿಮೆಯಾಗುವುದು.

**21. ಲೋಹೀಯ ಗುಣ:–** ಲೋಹೀಯ ಗುಣವು ಒಂದು ಆವರ್ತದ ಗುಂಟ ಕಡಿಮೆಯಾಗುತ್ತಾ ಹೋಗುತ್ತದೆ. & ಒಂದು ವರ್ಗದ ಕೆಳಗೆ ಸಾಗಿದಂತೆ ಹೆಚ್ಚಾಗುತ್ತದೆ.  ಉದಾ:– 14ನೇ ವರ್ಗದಲ್ಲಿರುವ ಕಾರ್ಬನ್ & ಸಿಲಿಕಾನ್ ಅಲೋಹಗಳು. ಜರ್ಮೇನಿಯಂ ಲೋಹದ ಸ್ವಭಾವ ಹೊಂದಿದ್ದು, ಅಲೋಹದ ಭೌತಗುಣ ಹೊಂದಿರುವುದರಿಂದ ಲೋಹಾಭ ಎನ್ನುವರು.

**22. ಆವರ್ತ ಕೋಷ್ಟಕದ ಪ್ರಯೋಜನಗಳೇನು?**

1. ರಸಾಯನ ಶಾಸ್ತ್ರದ ಅಧ್ಯಯನವನ್ನು ಸರಳೀಕರಣಗೊಳಿಸಿ ವ್ಯವಸ್ಥಿತವಾಗುವಂತಿಡುತ್ತದೆ.
2. ಆವಿಷ್ಕಾರಗೊಳ್ಳದ ಧಾತುಗಳ ಪರಮಾಣು ರಾಶಿ & ಗುಣಗಳನ್ನು ಊಹಿಸಲು ಸಾಧ್ಯ.
3. ಪರಮಾಣುವಿನ ವರ್ತನೆಯನ್ನು ಸ್ಪಷ್ಟವಾಗಿ ತಿಳಿಸಿ ಸಾಕ್ಷಾಧಾರ ಒದಗಿಸುವುದು.
4. ಆವರ್ತ ಕೋಷ್ಟಕದಲ್ಲಿ ಧಾತುವನ್ನು ಆದರಿಸಿ ಗುಣಲಕ್ಷಣಗಳನ್ನು ಊಹಿಸಬಹುದು.

**23. ಅತ್ಯಂತ ಹೊರಕವದಲ್ಲಿ ಒಂದು ಇಲೆಕ್ಟ್ರಾನ್ ಹೊಂದಿರುವ ಮೂರು ಧಾತುಗಳು.**

1ನೇ ಗುಂಪಿನ ಧಾತುಗಳೆಲ್ಲವೂ ತಮ್ಮ ಅತ್ಯಂತ ಹೊರ ಕವಚದಲ್ಲಿ ಕೇವಲ ಒಂದು ಇಲೆಕ್ಟ್ರಾನ್ ಮಾತ್ರ ಹೊಂದಿವೆ.

ಹೈಡ್ರೋಜನ್, ಲೀಥಿಯಂ, ಸೋಡಿಯಂ, ಪೊಟ್ಯಾಸಿಯಂ.(H, Li, Na, K).

**24. ಅತ್ಯಂತ ಹೊರ ಕವಚದಲ್ಲಿ ಎರಡು ಇಲೆಕ್ಟ್ರಾನ್ ಹೊಂದಿರುವ ಧಾತುಗಳನ್ನು ಹೆಸರಿಸಿ.**

ಎರಡನೇ ಗುಂಪಿನ ಧಾತುಗಳು ತಮ್ಮ ಹೊರಕವಚದಲ್ಲಿ ಎರಡು ಇಲೆಕ್ಟ್ರಾನ್‌ಗಳನ್ನು ಹೊಂದಿವೆ. ಮೆಗ್ನೀಸಿಯಂ, ಕ್ಯಾಲ್ಸಿಯಂ (Mg, Ca).

**25. ಪೂರ್ತಿ ತುಂಬಿರುವ ಹೊರ ಕವಚನ್ನು ಹೊಂದಿರುವ ಧಾತುಗಳನ್ನು ಹೆಸರಿಸಿ.**

18ನೇ ಗುಂಪಿನ ಧಾತುಗಳು ತಮ್ಮ ಹೊರಕವಚವನ್ನು ಇಲೆಕ್ಟ್ರಾನ್‌ಗಳಿಂದ ಸಂಪೂರ್ಣವಾಗಿ ತುಂಬಿವೆ. ಹೀಲಿಯಂ, ನಿಯಾನ್, ಆರ್ಗಾನ್..

**26. ಲೀಥಿಯಂ, ಸೋಡಿಯಂ, ಮತ್ತು ಪೊಟ್ಯಾಸಿಯಂ ಇವೆಲ್ಲವೂ ಲೋಹಗಳಾಗಿದ್ದು, ನೀರಿನೊಂದಿಗೆ ವರ್ತಿಸಿ ಹೈಡ್ರೋಜನ್ ಅನಿಲವನ್ನು ಬಿಡುಗಡೆ ಮಾಡುತ್ತವೆ. ಈಧಾತುಗಳ ಪರಮಾಣುಗಳಲ್ಲಿ ಏನಾದರೂ ಸಾಮ್ಯತೆ ಇದೆಯೇ?**

ಈ ಮೂರೂ ಧಾತುಗಳು, 1ನೇ ಗುಂಪಿಗೆ ಸೇರಿವೆ, ಇವುಗಳ ವೇಲೆನ್ಸಿ ಮತ್ತು ವೇಲೆನ್ಸ್ ಇಲೆಕ್ಟ್ರಾನ್‌ಗಳ ಸಂಖ್ಯೆ 1 ಆಗಿದೆ. ಇವುಗಳ ಪರಮಾಣು ಗಾತ್ರ ಹೆಚ್ಚು, ಇವು ಇಲೆಕ್ಟ್ರಾನ್‌ಗಳನ್ನು ಸುಲಭವಾಗಿ ಬಿಟ್ಟುಕೊಡುತ್ತವೆ.

**27. ಹೀಲಿಯಂ ಕ್ರಿಯಾಪಟುವಲ್ಲದ ಅನಿಲವಾಗಿದೆ. ಮತ್ತು ನಿಯಾನ್ ಕಡಿಮೆ ಕ್ರಿಯಾಪಟುತ್ವ ತೋರುತ್ತದೆ. ಅವುಗಳ ಅಣುಗಳಲ್ಲಿ ಏನಾದರೂ ಸಾಮ್ಯತೆ ಇದೆಯೇ?** ಈ ಧಾತುಗಳ ಪರಮಾಣುಗಳ ಇಲೆಕ್ಟ್ರಾನ್ ಕಕ್ಷೆಗಳು ಸಂಪೂರ್ಣವಾಗಿ ತುಂಬಿಕೊಂಡಿವೆ. ಇವುಗಳ ವೇಲೆನ್ಸಿ ಸೊನ್ನೆ ಆಗಿದೆ.

**28. ಆಧುನಿಕ ಆವರ್ತಕ ಕೋಷ್ಟಕದ ಮೊದಲ ಹತ್ತು ಧಾತುಗಳಲ್ಲಿ ಲೋಹಗಳು ಯಾವುವು?**

**H, He, Li, Be,B,C,N,O,F, Ne.** ಲೀಥಿಯಂ ಮತ್ತು ಬೆರಿಲಿಯಂ ಲೋಹಗಳು.
ಉಳಿದಂತೆ ಹೈಡ್ರೋಜನ್, ಹೀಲಿಯಂ, ಬೋರಾನ್, ಕಾರ್ಬನ್, ನೈಟ್ರೋಜನ್, ಆಕ್ಸಿಜನ್, ಫ್ಲೋರಿನ್, ನಿಯಾನ್ ಅಲೋಹಗಳು.

**29. ಹೀಲಿಯಂ ತನ್ನಲ್ಲಿನ ಎಲೆಕ್ಟ್ರಾನ್‌ಗಳನ್ನು s-ಕಕ್ಷೆಯಲ್ಲಿಯೇ ಹಂಚಿಕೊಂಡಿದ್ದರೂ ಅದನ್ನು p-ಬ್ಲಾಕ್‌ನಲ್ಲಿ(18ನೇ ಗುಂಪು) ಇಡಲಾಗಿದೆ. ಏಕೆ?**

ಹೀಲಿಯಂ ನ ಕಕ್ಷೆಯ ಸಂಪೂರ್ಣವಾಗಿ ಇಲೆಕ್ಟ್ರಾನ್‌ಗಳಿಂದ ತುಂಬಿಕೊಂಡಿವೆ, ಇದರ ರಾಸಾಯನಿಕ ಗುಣಗಳು 18ನೇ ಗುಂಪಿನ ಇತರೆ ಧಾತುಗಳಂತೆಯೇ ಇವೆ. ಆದ ಕಾರಣ ಇದನ್ನು 18ನೇ ಗುಂಪು ಅಥವಾ p-ಬ್ಲಾಕ್‌ನಲ್ಲಿ ಇಡಲಾಗಿದೆ.

**30. ಆಧುನಿಕ ಆವರ್ತಕ ಕೋಷ್ಟಕದಲ್ಲಿನ ಸ್ಥಾನವನ್ನು ಆದರಿಸಿ ಕೆಳಗಿನವುಗಳಲ್ಲಿ ಯಾವ ಧಾತು ಅತಿ ಹೆಚ್ಚು ಲೋಹೀಯ ಲಕ್ಷಣವನ್ನು ಹೊಂದಿದೆ ಎಂದು ನೀವು ಭಾವಿಸುತ್ತೀರಿ? Ga, Ge, As, Se, Be.**

ಆವರ್ತಕ ಕೋಟಕದ ಒಂದು ಮತ್ತು ಎರಡನೇ ವರ್ಗದ ಧಾತುಗಳು (H–ಹೊರತು ಪಡಿಸಿ) ಅತಿ ಹೆಚ್ಚು ಲೋಹೀಯ ಗುಣವನ್ನು ಹೊಂದಿವೆ.

ಮೇಲಿನ ಧಾತುಗಳಲ್ಲಿ **Be** ಎರಡನೇ ಗುಂಪಿಗೆ ಸೇರಿದ್ದು, ಅತಿ ಹೆಚ್ಚು ಲೋಹೀಯ ಗುಣವನ್ನು ಹೊಂದಿದೆ.

**31. ಧಾತುಗಳ ವರ್ಗೀಕರಣದಲ್ಲಿ ಪರಮಾಣು ಸಂಖ್ಯೆಯು ಪರಮಾಣು ರಾಶಿಗಿಂತ ಉತ್ತಮ ಅಂಶ. ಏಕೆ?**

ಧಾತುಗಳ ಇಲೆಕ್ಟ್ರಾನ್ ವಿನ್ಯಾಸವು ಪರಮಾಣು ಸಂಖ್ಯೆ ಆದರಿಸಿದೆ, ಇಲೆಕ್ಟ್ರಾನ್ ವಿನ್ಯಾಸವು ಆವರ್ತಕಕೋಷ್ಟಕದ ಬೆನ್ನೆಲುಬಾಗಿದೆ.

ಧಾತುಗಳ ರಾಸಾಯನಿಕ ಗುಣಗಳು ಅವುಗಳ ವೇಲೆನ್ಸ್ ಇಲೆಕ್ಟ್ರಾನ್‌ಗಳನ್ನು ಅವಲಂಬಿಸಿದೆ. ಇಲೆಕ್ಟ್ರಾನ್ ವಿನ್ಯಾಸದಿಂದ ಆವರ್ತಕ ಕೋಷ್ಟಕ ಎಲ್ಲಾ ಅಂಶಗಳನ್ನು ಹೇಳಲು ಸಾಧ್ಯವಾಗಿದೆ. ಈ ಎಲ್ಲಾ ಅಂಶಗಳು ಧಾತುಗಳ ಇಲೆಕ್ಟ್ರಾನ್ ಸಂಖ್ಯೆ (ಪರಮಾಣು ಸಂಖ್ಯೆ)ಗಳನ್ನು ಅವಲಂಬಿಸಿವೆ.

**32. ಲೋಹಾಗಳು ಎಂದರೇನು? ಉದಾ ಕೊಡಿ.**

ಲೋಹ ಮತ್ತು ಅಲೋಹಗಳೆರಡರ ಲಕ್ಷಣಗಳನ್ನು ಹೊಂದಿರುವ ಧಾತುಗಳಿಗೆ ಲೋಹಾಭಗಳು ಎನ್ನುವರು. B,C,Ge,As, Sb, Te, and Po.

**32. ಈ ಕೆಳಗಿನವುಗಳನ್ನು ಹೆಸರಿಸಿ.**

- **ಅತಿ ಹೆಚ್ಚು ಪರಮಾಣು ಗಾತ್ರ ಹೊಂದಿರುವ ಧಾತು:** Cs (ಸೀಸಿಯಂ)
- **ಅತಿ ಕಡಿಮೆ ಪರಮಾಣು ಗಾತ್ರ ಹೊಂದಿರುವ ಧಾತು:** He (ಹೀಲಿಯಂ)
- **ಅತಿಹೆಚ್ಚು ರಾಸಾಯನಿಕ ಕ್ರಿಯಾಶೀಲ ಧಾತು:** ಲೋಹಗಳಲ್ಲಿ ಫ್ರಾನ್ಸಿಯಂ (Fr), ಅಲೋಹಗಳಲ್ಲಿ ಫ್ಲೋರಿನ್ (F).
- **ಅತಿ ಕಡಿಮೆ ರಾಸಾಯನಿಕ ಕ್ರಿಯಾಶೀಲ ಧಾತು:** ಅಲೋಹಗಳಲ್ಲಿ ರಾಜಾನಿಲಗಳು (ಹಿಲಿಯಂ, ನಿಯಾನ್. . ) ಲೊಹಗಳಲ್ಲಿ ಚಿನ್ನದ, ಬೆಳ್ಳಿ, ಪ್ಲಾಟಿನಂ.
- **ಅತಿ ಹೆಚ್ಚು ವಿದ್ಯುತ್ ಧನೀಯತೆ ಹೊಂದಿರುವ ಧಾತು:** Cs (ಸೀಸಿಯಂ)
- **ಅತಿ ಹೆಚ್ಚು ವಿದ್ಯುತ್ ಋಣೀಯತೆ ಹೊಂದಿರುವ ಧಾತು;** ಫ್ಲೋರಿನ್ (F).

**************************